ಪ್ರೀತಿಯಂತೆ. ಅವರು ಮನಸ್ಸು ಮಾಡಿದರೆ ಹೊಸಳ್ಳಿ ಮಾತ್ರವಲ್ಲ ಸುತ್ತಲಿನ ಹದಿನೆಂಟು ಹಳ್ಳಿಗಳು ಉದ್ಧಾರವಾಗಿ ಬಿಡುತ್ತವೆ ಎಂದು ಕನಸು ಕಂಡರು.

ಪುರುಷೋತ್ತಮ, ಅಪ್ಪನ ಕಡತಗಳಲ್ಲಿದ್ದ ಜಿಲ್ಲೆಯ ನೀರಾವರಿ ಯೋಜನೆಗಳಿಗೆ ಸಂಬಂಧಿಸಿದ ಹಳೆಯ ಪೇಪರುಗಳ ಕಟಿಂಗ್‌ಗಳಿಂದ ಮಾಹಿತಿಗಳನ್ನು ಹುಡುಕಿ ತೆಗೆದ. ಅವನ್ನು ಊರ ಜನರಿಗೂ ತೋರಿಸಿ ಅವೇ ಅಂಕಿಅಂಶ ಇಟ್ಟುಕೊಂಡು ಒಂದು ಪತ್ರ ಬರೆದು ಅದನ್ನು ಜಿಲ್ಲಾಧಿಕಾರಿಯವರಿಗೆ ಕಳಿಸಿ ಮುಖ್ಯಮಂತ್ರಿ ಬರುವ ವೇಳೆಗೆ ಅಂದಾಜು ಯೋಜನೆಯೊಂದನ್ನು ರೂಪಿಸಿಕೊಡುವಂತೆ ಮನವಿ ಮಾಡಿಕೊಂಡ.

ವಜ್ರ ಮಹೋತ್ಸವ ಸ್ವಾಗತ ಸಮಿತಿ ಮತ್ತು ಉಪ ಸಮಿತಿಗಳು ಐದಾರು ಸಲ ಸಭೆ ಸೇರಿ ಕಾರ್ಯಕ್ರಮ ಹೇಗೆ ಮಾಡಬೇಕು ಎಂಬ ಕುರಿತು ಚರ್ಚಿಸಿದವು. ಆದರೆ ವಿಧಾನಸಭೆ ಅಧಿವೇಶನ, ಚುನಾವಣೆಗಳು, ಬರ ಇತ್ಯಾದಿಗಳ ನೆಪದಲ್ಲಿ ಸಮಾರಂಭಕ್ಕೆ ಮುಖ್ಯಮಂತ್ರಿ ಬರುವ ದಿನ ನಿಗದಿಯಾಗದೆ ಮುಂದೂಡುತ್ತಲೇ ಹೋಯಿತು. ಕೊನೆಗೆ ಸಮಾರಂಭ ನಡೆಯಲಾರದು ಎನ್ನುವಂತಹ ಸ್ಥಿತಿಗೆ ತಲುಪಿತು. ಊರ ಜನರು ಕಾರ್ಯಕ್ರಮದ ಬಗ್ಗೆ ಆಸಕ್ತಿ ಕಳೆದುಕೊಂಡರು. ಆದರೆ ಅದೇ ಹೊತ್ತಲ್ಲೇ ಒಂದು ದಿನ ಕ್ಷೇತ್ರದ ಶಾಸಕರು ಖುದ್ದಾಗಿ ಹೊಸಳ್ಳಿಗೆ ಬಂದು 'ಇದೇ ತಿಂಗಳು ಇಪ್ಪತ್ತೆಂಟನೇ ತಾರೀಕು ಮುಖ್ಯಮಂತ್ರಿಗಳು ಹೊಸಳ್ಳಿಗೆ ಬರಲು ಒಪ್‌ಕಂಡಿದಾರೆ.... ಇವತ್ತು ಅವರ ಟೂರ್ ಪ್ರೋಗ್ರಾಂ ಬಂತು. ಸಂಜೆ ಐದಕ್ಕೆ ಸಭೆ. ಸಭೆ ಮುಗಿಸಿ ಅವರು ಬೆಂಗಳೂರಿಗೆ ಹೋಗ್ತಾರೆ' ಎಂಬ ಸಂತಸದ ಸುದ್ದಿಯನ್ನು ಹೇಳಿ ಹೊಸಳ್ಳಿಯ ಜನರಲ್ಲಿ ಆನಂದಾಶ್ಚರ್ಯಗಳನ್ನು ಉಂಟು ಮಾಡಿದ್ದರು.

'ಸಭೆ ಮುಗಿಸಿ ಬೆಂಗಳೂರಿಗೆ ಹೋಗೊ ಬದಲು ಅವತ್ತು ಊರಲ್ಲೇ ಉಳಿದು ಸುತ್ತಮುತ್ತಲ ಹಳ್ಳಿಗಳ ಜನರ ಕಷ್ಟ ಸುಖ ವಿಚಾರಿಸುವ ನಿಮ್ಮ ''ಗ್ರಾಮ ಸಾಂತ್ವನ'' ಕಾರ್ಯಕ್ರಮ ನಡೆಸಬಹುದಲ್ಲ' ಅಂತ ಬೆಳಿಗ್ಗೆ ಫೋನ್ ಮಾಡಿ ಮುಖ್ಯಮಂತ್ರಿಯವರಿಗೆ ಕೇಳಿಕೊಂಡಿದ್ದೇನೆ... ಮುಖ್ಯಮಂತ್ರಿಗಳು ಅದಕ್ಕೆ ಆಗಲಿ ಅಂತಾನೂ ಹೇಳಲಿಲ್ಲ... ಇಲ್ಲ ಅನ್ನಲೂ ಇಲ್ಲ... ಗ್ರಾಮೀಣ ಜನರ ಕಷ್ಟ ಸುಖಗಳನ್ನು ಕೇಳಿ ಸಮಾಧಾನ ಹೇಳುವುದೆಂದರೆ ಅವರಿಗೆ ಶಾನೆ ಇಷ್ಟ. ಮುಖ್ಯಮಂತ್ರಿಯವರನ್ನು ನಾನು ಒಪ್ಪಿಸ್‌ತೀನಿ. ಅವರು ನನ್ನ ಮಾತಿಗೆ ಇಲ್ಲ ಅನ್ನಲ್ಲ' ಎಂದರಲ್ಲದೆ ಹೊಸಳ್ಳಿಗೆ ಮೊದಲ

